# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಅಬ್ದುಲ್ ಜಬ್ಬರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 581 |
| ಉತ್ತರಿಸುವ ದಿನಾಂಕ | : | 13.12.2024 |
| ಉತ್ತರಿಸುವ ಸಚಿವರು | : | ಮಾನ್ಯ ಕಾರ್ಮಿಕ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಎಷ್ಟು ಬೀಡಿ ಕಾರ್ಮಿಕರು ಕಾರ್ಯ ನಿರ್ವಹಿಸುತ್ತಿದ್ದಾರೆ; (ತಾಲ್ಲೂಕುವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿರುವ ಬೀಡಿ ಕಾರ್ಮಿಕರ ಸಂಖ್ಯೆಗೆ ಸಂಬಂಧಿಸಿದಂತೆ ಇಲಾಖೆ ವತಿಯಿಂದ ಯಾವುದೇ ಸಮೀಕ್ಷೆ ನಡೆಸಿರುವುದಿಲ್ಲ. ಆದ್ದರಿಂದ ನಿಖರವಾದ ಬೀಡಿ ಕಾರ್ಮಿಕರ ಸಂಖ್ಯೆ ಲಭ್ಯವಿರುವುದಿಲ್ಲ. ಆದರೆ ಬೀಡಿ ಮತ್ತು ಸಿಗಾರ್ ಕಾಯ್ದೆಯಡಿ ಸಂಸ್ಥೆಗಳ ನೋಂದಣಿ/ ನವೀಕರಣ ಸಂದರ್ಭದಲ್ಲಿ ನೀಡಿದ ಮಾಹಿತಿ ಹಾಗೂ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಜಾರಿಗೊಳಿಸುತ್ತಿರುವ ಅಂಬೇಡ್ಕರ್ ಕಾರ್ಮಿಕ ಸಹಾಯಹಸ್ತ ಯೋಜನೆಯಡಿ ಬೀಡಿ ಕಾರ್ಮಿಕರು ಸೇರಿದಂತೆ ಒಟ್ಟು 21 ವರ್ಗಗಳ ಅಸಂಘಟಿತ ಕಾರ್ಮಿಕರನ್ನು ಉಚಿತವಾಗಿ ನೋಂದಾಯಿಸಿ ಸ್ಮಾರ್ಟ್ ಕಾರ್ಡ್ ವಿತರಿಸಲಾಗುತ್ತಿದ್ದು ಈ ಸಂದರ್ಭದಲ್ಲಿ ಸಂಗ್ರಹಿಸಲಾದ ಬೀಡಿ ಕಾರ್ಮಿಕರ ಸಂಖ್ಯೆ ಲಭ್ಯವಿದ್ದು ಮಾಹಿತಿ ಈ ಕೆಳಕಂಡಂತಿದೆ.<br><br>ರಾಜ್ಯದಲ್ಲಿರುವ ಬೀಡಿ ಕಾರ್ಮಿಕರ ಒಟ್ಟು ಸಂಖ್ಯೆಗೆ ಸಂಬಂಧಿಸಿದಂತೆ ಬೀಡಿ ಮತ್ತು ಸಿಗಾರ್ ಕಾಯ್ದೆಯಡಿ ಸಂಸ್ಥೆಗಳ ನೋಂದಣಿ/ ನವೀಕರಣ ಸಂದರ್ಭದಲ್ಲಿ ಒದಗಿಸಲಾದ ಮಾಹಿತಿಯ ಪ್ರಕಾರ 257206 ಬೀಡಿ ಕಾರ್ಮಿಕರ ಸಂಖ್ಯೆ ಲಭ್ಯವಿದ್ದು ವಿವರವನ್ನು ಅನುಬಂಧ-1ರಲ್ಲಿ ಒದಗಿಸಿದೆ. ಅಂಬೇಡ್ಕರ್ ಕಾರ್ಮಿಕ ಸಹಾಯಹಸ್ತ ಯೋಜನೆಯಡಿ 83,547 ಬೀಡಿ ಕಾರ್ಮಿಕರು ನೋಂದಣಿಯಾಗಿರುತ್ತಾರೆ ಹಾಗೂ ನೋಂದಾಯಿತ ಬೀಡಿ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಿಸಲಾಗುತ್ತದೆ. ಅಂಬೇಡ್ಕರ್ ಕಾರ್ಮಿಕ ಸಹಾಯಹಸ್ತ ಯೋಜನೆಯಡಿ ನೋಂದಣಿಯಾದ ಬೀಡಿ ಕಾರ್ಮಿಕರ ಕುರಿತಂತೆ ಪ್ರತ್ಯೇಕವಾಗಿ ತಾಲ್ಲೂಕುವಾರು ಮಾಹಿತಿ ಲಭ್ಯವಿಲ್ಲದ ಕಾರಣ ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-2 ರಲ್ಲಿ ಒದಗಿಸಿದೆ. |
| ಆ) | ರಾಜ್ಯದಲ್ಲಿ ಬೀಡಿ ಕಾರ್ಮಿಕರ ಸಮೀಕ್ಷೆ ಮಾಡಲಾಗಿದೆಯೇ; ಮಾಡದಿದ್ದಲ್ಲಿ, ಸಮೀಕ್ಷೆ ನಡೆಸಲು ಇರುವ ಲೋಪದೋಷಗಳೇನು; (ವಿವರವಾಗಿ ಮಾಹಿತಿ ನೀಡುವುದು) | ರಾಜ್ಯದಲ್ಲಿರುವ ಬೀಡಿ ಕಾರ್ಮಿಕರ ಸಂಖ್ಯೆಗೆ ಸಂಬಂಧಿಸಿದಂತೆ ಇಲಾಖೆ ವತಿಯಿಂದ ಯಾವುದೇ ಸಮೀಕ್ಷೆ ನಡೆಸಿರುವುದಿಲ್ಲ ಹಾಗೂ ಪ್ರಸ್ತುತ 'ಸಮೀಕ್ಷೆ ನಡೆಸುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |
| ಇ) | ಕಟ್ಟಡ ಕಾರ್ಮಿಕರ ಮಾದರಿಯಲ್ಲಿ ಬೀಡಿ ಕಾರ್ಮಿಕರಿಗೆ ಕಲ್ಯಾಣ ಮಂಡಳಿಯನ್ನು ರಚನೆ ಮಾಡುವ ಉದ್ದೇಶ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಯದಲ್ಲಿ ತೊಡಗಿರುವ ಕಾರ್ಮಿಕರಿಗೆ ಸಂಬಂಧಿಸಿದಂತೆ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗ ಕ್ರಮೀಕರಣ ಮತ್ತು ಸೇವಾ ಷರತ್ತುಗಳ) ಕಾಯ್ದೆ 1996 ಕಾಯ್ದೆಯನ್ನು ರೂಪಿಸಿ ಜಾರಿಗೊಳಿಸಲಾಗುತ್ತಿದ್ದು, ಸದರಿ ಕಾಯ್ದೆಯನ್ವಯ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯನ್ನು ರಚಿಸಲಾಗಿರುತ್ತದೆ. ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸುಂಕ ಕಾಯ್ದೆ 1996ರಡಿ ವಸೂಲಾಗುವ ಕಟ್ಟಡ ಮತ್ತು ಇತರೆ ನಿರ್ಮಾಣ ವೆಚ್ಚದ ಶೇ 1 ರಷ್ಟು ಸುಂಕದ ಮೊತ್ತದಿಂದ ನೋಂದಾಯಿತ ಅರ್ಹ ಕಟ್ಟಡ ಕಾರ್ಮಿಕ ಫಲಾನುಭವಿಗಳಿಗೆ ವಿವಿಧ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಈ ಸೌಲಭ್ಯವನ್ನು ಬೀಡಿ ಕಾರ್ಮಿಕರಿಗೆ ರಾಜ್ಯ ಸರ್ಕಾರದಿಂದ ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿ ಮಾದರಿಯಲ್ಲಿ ಸೌಲಭ್ಯಗಳನ್ನು ನೀಡಲು ಅವಕಾಶವಿರುವುದಿಲ್ಲ. ಆದಕಾರಣ ಕಟ್ಟಡ ಕಾರ್ಮಿಕರ ಮಾದರಿಯಲ್ಲಿ ಬೀಡಿ ಕಾರ್ಮಿಕರಿಗೆ ಕಲ್ಯಾಣ ಮಂಡಳಿ ಮಾಡುವ ಉದ್ದೇಶ ಸರ್ಕಾರದ ಮುಂದೆ ಇರುವುದಿಲ್ಲ. ಆದರೆ ಈ |

| | | |
|---|---|---|
| | | ಕಾರ್ಮಿಕರೂ ಸೇರಿದಂತೆ 21 ವರ್ಗಗಳ ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸುವ ಉದ್ದೇಶದಿಂದ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಮೂಲಕ "ಅಂಬೇಡ್ಕರ್ ಕಾರ್ಮಿಕ ಸಹಾಯಹಸ್ತ ಯೋಜನೆ" ಯಡಿ ನೋಂದಾಯಿಸಿ ಉಚಿತವಾಗಿ ಗುರುತಿನ ಚೀಟಿ ವಿತರಿಸಲಾಗುತ್ತಿದೆ. |
| ಈ) | ಬೀಡಿ ಕಾರ್ಮಿಕರಿಗೆ ಗುರುತಿನ ಚೀಟಿ ನೀಡದಿರಲು ಕಾರಣವೇನು; (ವಿವರವಾಗಿ ಮಾಹಿತಿ ಒದಗಿಸುವುದು) | ಬೀಡಿ ಕಾರ್ಮಿಕರ ಕಲ್ಯಾಣ ನಿಧಿ ಕಾಯ್ದೆ 1976 ರಡಿ ಇರುವ ಬೀಡಿ ಕಾರ್ಮಿಕರ ಕಲ್ಯಾಣ ನಿಧಿ ನಿಯಮಗಳು 1978 ರ ನಿಯಮ 41 ರಡಿ ಬೀಡಿ ಕಾರ್ಮಿಕರಿಗೆ ಮಾಲೀಕರು /ಗುತ್ತಿಗೆದಾರರು ಗುರುತಿನ ಚೀಟಿಗಳನ್ನು ನೀಡಲು ಅವಕಾಶವಿತ್ತು, ಆದರೆ, ಕೇಂದ್ರ ಸರ್ಕಾರವು ಅಧಿಸೂಚನೆ ಸಂಖ್ಯೆ: 50, NEW DELHI, THURSDAY, AUGUST 8, 2019/ SHRAVANA 17, 1941 (SAKA) ರಂತೆ ಸದರಿ ಕಾಯ್ದೆಯನ್ನು ರದ್ದುಗೊಳಿಸಿರುವುದರಿಂದ ಬೀಡಿ ಕಾರ್ಮಿಕರಿಗೆ ಹೊಸದಾಗಿ ಗುರುತಿನ ಚೀಟಿಗಳನ್ನು ನೀಡಲು ಯಾವುದೇ ಕಾಯ್ದೆ ಅಥವಾ ಪ್ರಾವಧಾನಗಳು ಜಾರಿಯಲ್ಲಿರುವುದಿಲ್ಲ.<br><br>ಆದರೆ, ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ವತಿಯಿಂದ ಅಂಬೇಡ್ಕರ್ ಕಾರ್ಮಿಕ ಸಹಾಯಹಸ್ತ ಯೋಜನೆಯಡಿ ಬೀಡಿ ಕಾರ್ಮಿಕರು ಸೇರಿದಂತೆ 21 ವರ್ಗದ ಅಸಂಘಟಿತ ಕಾರ್ಮಿಕರನ್ನು ಗುರುತಿಸಿ ಸ್ಮಾರ್ಟ್ ಕಾರ್ಡ್ ನೀಡಲಾಗುತ್ತಿದೆ. |
| ಉ) | ಸೆಸ್ ಕಾಯ್ದೆಯನ್ನು ಮತ್ತೆ ಮರು ಸ್ಥಾಪನೆ ಮಾಡಲು ಸರ್ಕಾರ ಚಿಂತನೆ ನಡೆಸಿದೆಯೇ? (ವಿವರವಾಗಿ ಮಾಹಿತಿ ಒದಗಿಸುವುದು) | ಬೀಡಿ ಕಾರ್ಮಿಕರ ಕಲ್ಯಾಣ ಸುಂಕ ಕಾಯ್ದೆ1976 ಕೇಂದ್ರ ಸರ್ಕಾರದ ಕಾಯ್ದೆಯಾಗಿದ್ದು,ಇದನ್ನು ಕೇಂದ್ರ ಕಾರ್ಮಿಕರ ಇಲಾಖೆಯು ಅನುಷ್ಠಾನಗೊಳಿಸುತ್ತಿತ್ತು.ಪ್ರಸ್ತುತ ಸದರಿ ಕಾಯ್ದೆಯನ್ನು ಕೇಂದ್ರ ಸರ್ಕಾರವು ಅಧಿಸೂಚನೆ ಸಂಖ್ಯೆ: 19, NEW DELHI, FRIDAY, MAY,5,2017/ VAISAKHA 15,1939 (SAKA) ರಂತೆ ರದ್ದುಪಡಿಸಿದ್ದು, ಸದರಿ ಕಾಯ್ದೆಯನ್ನು ಮರುಸ್ಥಾಪಿಸುವ ಅಧಿಕಾರ ವ್ಯಾಪ್ತಿ ರಾಜ್ಯ ಸರ್ಕಾರಕ್ಕೆ ಇರುವುದಿಲ್ಲ. |

ಸಂಖ್ಯೆ: ಕಾಇ 517 ಎಲ್ ಡಬ್ಲ್ಯೂಎ 2024

(ಸಂತೋಷ್ ಎಸ್. ಲಾಡ್)
ಕಾರ್ಮಿಕ ಸಚಿವರು

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೆ. ಅಬ್ದುಲ್ ಜಬ್ಬರ್(ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 581 (493) ಕ್ಕೆ**

**ಅನುಬಂಧ- 1**

| ಕ್ರ. ಸಂ | ಜಿಲ್ಲೆ | ತಾಲ್ಲೂಕು | ಬೀಡಿ ಮತ್ತು ಸಿಗಾರ್ ಕಾಯ್ದೆಯಡಿ ಸಂಸ್ಥೆಗಳಲ್ಲಿ ನೋಂದಣಿಯಾದ ಕಾರ್ಮಿಕರ ಸಂಖ್ಯೆ |
|---|---|---|---|
| 1. | ಬಾಗಲಕೋಟೆ | | 0 |
| 2. | ಬಳ್ಳಾರಿ | | 0 |
| 3. | ಬೆಳಗಾವಿ | ನಿಪ್ಪಾಣಿ | 124 |
| | | ರಾಮದುರ್ಗ | 24 |
| 4. | ಬೆಂಗಳೂರು ಗ್ರಾಮಾಂತರ | | 0 |
| 5. | ಬೆಂಗಳೂರು | | 0 |
| 6. | ಬೀದರ್ | | 0 |
| 7. | ಚಾಮರಾಜನಗರ | ಚಾಮರಾಜನಗರ | 845 |
| 8. | | ಗುಂಡ್ಲು ಪೇಟೆ | 470 |
| 9. | ಚಿಕ್ಕಬಳ್ಳಾಪುರ | ಗೌರಿಬಿದನೂರು | 48 |
| 10. | ಚಿಕ್ಕಮಗಳೂರು | | 0 |
| 11. | ಚಿತ್ರದುರ್ಗ | | 0 |
| 12. | ದಕ್ಷಿಣ ಕನ್ನಡ | ಮಂಗಳೂರು | 81153 |
| | | ಉಳ್ಳಾಲ | 13350 |
| | | ಮುಲ್ಕಿ | 10041 |
| | | ಮೂಡಬಿದ್ರೆ | 60424 |
| | | ಬೆಳ್ತಂಗಡಿ | 8778 |
| | | ಬಂಟ್ವಾಳ | 9319 |
| | | ಪುತ್ತೂರು | 10646 |
| | | ಸುಳ್ಯ | 450 |
| | | ಕಡಬ | 320 |
| 13. | ದಾವಣಗೆರೆ | ದಾವಣಗೆರೆ | 3128 |
| | | ಹರಿಹರ | 871 |
| 14. | ಧಾರವಾಡ | ಹುಬ್ಬಳ್ಳಿ | 506 |
| 15. | ಗದಗ | | 0 |
| 16. | ಹಾಸನ | | 0 |
| 17. | ಹಾವೇರಿ | ಹಾವೇರಿ | 187 |
| | | ರಾಣೇಬೆನ್ನೂರು | 689 |
| | | ಸವಣೂರು | 69 |
| 18. | ಕಲಬುರ್ಗಿ | | 0 |
| 19. | ಕೊಡಗು | | 0 |
| 20. | ಕೋಲಾರ | ಕೋಲಾರ ಗೋಲ್ಡ್ ಫೀಲ್ಡ್ (ಕೆ.ಜಿ.ಎಫ್) | 21 |

| | | | |
|---|---|---|---|
| | | | |
| **21.** | ಕೊಪ್ಪಳ | | 0 |
| **22.** | ಮಂಡ್ಯ | ಮಂಡ್ಯ | 745 |
| | | ಮದ್ದೂರು | 85 |
| | | ಮಳವಳ್ಳಿ | 217 |
| | | ನಾಗಮಂಗಲ | 40 |
| | | ಪಾಂಡಾಪುರ | 55 |
| | | ಶ್ರೀರಂಗ ಪಟ್ಟಣ | 75 |
| **23.** | ಮೈಸೂರು | ಮೈಸೂರು | 4859 |
| **24.** | ರಾಯಚೂರು | | 0 |
| **25.** | ರಾಮನಗರ | ರಾಮನಗರ | 54 |
| | | ಕನಕಪುರ | 12 |
| | | ಚನ್ನಪಟ್ಟಣ | 463 |
| **26.** | ಶಿವಮೊಗ್ಗ | | 0 |
| **27.** | ತುಮಕೂರು | ತುಮಕೂರು | 934 |
| | | ಗುಬ್ಬಿ | 145 |
| | | ಚಿಕ್ಕನಾಯಕನ ಹಳ್ಳಿ | 254 |
| | | ತಿಪಟೂರು | 297 |
| | | ತುರವೇಕೆರೆ | 210 |
| | | ಕುಣಿಗಲ್ | 228 |
| | | ಶಿರಾ | 4800 |
| | | ಪಾವಗಡ | 2400 |
| | | ಮಧುಗಿರಿ | 521 |
| | | ಕೊರಟಗೆರೆ | 585 |
| **28.** | ಉಡುಪಿ | ಉಡುಪಿ | 30261 |
| | | ಕಾಪು | 570 |
| | | ಬ್ರಹ್ಮಾವರ | 1245 |
| | | ಕಾರ್ಕಳ | 4543 |
| | | ಕುಂದಾಪುರ | 1305 |
| | | ಬೈಂದೂರು | 450 |
| | | ಹೆಬ್ರಿ | 360 |
| **29.** | ಉತ್ತರ ಕನ್ನಡ | | 0 |
| **30.** | ವಿಜಯನಗರ | | 0 |
| **31.** | ವಿಜಯಪುರ | | 0 |
| **32.** | ಯಾದಗಿರಿ | ಯಾದಗಿರಿ | 30 |
| | | | |
| | | **ಒಟ್ಟು** | **257206** |

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೆ. ಅಬ್ದುಲ್ ಜಬ್ಬರ್(ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 581 (493) ಕ್ಕೆ**

**ಅನುಬಂಧ- 2**

| Sl. No | DISTRICT | Beedi Workers |
|---|---|---|
| 1 | BAGALKOTE | 220 |
| 2 | BALLARI | 2589 |
| 3 | BELAGAVI | 1260 |
| 4 | BENGALURU RURAL | 608 |
| 5 | BENGALURU URBAN | 660 |
| 6 | BIDAR | 19 |
| 7 | CHAMARAJANAGARA | 3101 |
| 8 | CHIKKABALLAPURA | 630 |
| 9 | CHIKKAMAGALURU | 318 |
| 10 | CHITRADURGA | 944 |
| 11 | DAKSHINA KANNADA | 19872 |
| 12 | DAVANGERE | 5753 |
| 13 | DHARWAD | 2370 |
| 14 | GADAG | 444 |
| 15 | HASSAN | 189 |
| 16 | HAVERI | 4669 |
| 17 | KALABURAGI | 86 |
| 18 | KODAGU | 52 |
| 19 | KOLAR | 3768 |
| 20 | KOPPAL | 166 |
| 21 | MANDYA | 2703 |
| 22 | MYSURU | 6106 |
| 23 | RAICHUR | 15 |
| 24 | RAMANAGARA | 3283 |
| 25 | SHIVAMOGGA | 751 |
| 26 | TUMAKURU | 16260 |
| 27 | UDUPI | 4351 |
| 28 | UTTARA KANNADA | 75 |
| 29 | VIJAYANAGAR | 234 |
| 30 | VIJAYAPURA | 35 |
| 31 | YADGIR | 2016 |
| | **Grand Total** | **83547** |